ನನ್ನ ಓದು

# ಸಮಸಮಾಜ ಕನಸುವ ಪಲುಕುಗಳು



ಆರ್. ಸುನಂದಮ್ಮ

ಎಚ್.ಆರ್. ಸುಜಾತಾ ಅವರ ಸಣ್ಣಕಥೆಗಳ ಸಂಕಲನ 'ಪದುಮ ಪುರುಷ' ಒಟ್ಟು ಹನ್ನೆರಡು ಕಥೆಗಳನ್ನು ಒಳಗೊಂಡಿದೆ. ಪ್ರಧಾನವಾಗಿ ಈ ಕಥೆಗಳು ಹೆಣ್ಣಿನ ಬದುಕಿನಲ್ಲಿ ಆಗುವ ಪಲ್ಲಟಗಳನ್ನು ಗುರುತಿಸುತ್ತವೆ. ಹಾಗೇ ಕೌಟುಂಬಿಕ ವ್ಯವಸ್ಥೆಯನ್ನು ರಕ್ಷಿಸಲು ರೂಪಿಸಲಾದ ಮೌಲ್ಯಗಳನ್ನು ದಾಟುವ ಮೂಲಕ ತಮ್ಮ ಬದುಕು ಮತ್ತು ಪರಿಸ್ಥಿತಿಗೆ ಕಾರಣವಾಗುವ ಪಿತೃಪ್ರಧಾನ ಅಧಿಕಾರ ಕೇಂದ್ರವನ್ನು ಲೀಲಾಜಾಲವಾಗಿ ಈಜಿ ದಡ ಸೇರಲು ಪ್ರಯತ್ನಿಸುತ್ತವೆ. ನಗರ ಕೇಂದ್ರಿತ ನೆಲೆಯಲ್ಲೇ ರಚಿತವಾದ ಕಥೆಗಳ ನಿರೂಪಕಿ ಯಾವುದೇ ರೀತಿಯ ತೀರ್ಮಾನ, ವ್ಯಾಖ್ಯಾನಗಳನ್ನು ಹೇಳದೆ ತನ್ನ ನಿಲುವನ್ನು ವ್ಯಕ್ತಪಡಿಸುವ ರೀತಿ ಸೋದರಿ ಭಾವದ ನೆಲೆಯಿಂದ ಅತ್ಯಂತ ಧನಾತ್ಮಕವಾದದ್ದು.

ಒಂಟಿ ಹೆಣ್ಣಿನ ಹಲವು ಸಮಸ್ಯೆಗಳನ್ನು ನಮ್ಮ ಸಾಹಿತ್ಯ ಇನ್ನೂ ಮೌಲಿಕವಾಗಿ ಹಿಡಿದಿಲ್ಲವೆನಿಸುತ್ತದೆ. ಆ ಮಹಿಳೆಯ ಒಳಮುಖ ಆಲೋಚನೆಗಳಿಗೆ ಇನ್ನೂ ಹಲವು ದಿಕ್ಕುಗಳನ್ನು ಕಾಣುವ, ಕಾಣಬೇಕಾಗಿರುವ ಅಗತ್ಯವಿದೆ. ಒಂಟಿ ಹೆಣ್ಣುಗಳನ್ನು ಸಿದ್ಧಮಾದರಿಗಳಲ್ಲೇ ಕಡೆದು ನಿಲ್ಲಿಸುವುದು ಹಾಗೂ ಅವರ ಒಳಗನ್ನು ಬಗೆಯದೆ ತೀರ್ಮಾನಿಸುವುದೇ ಹೆಚ್ಚು. ಆದರೆ, ಸುಜಾತಾ ಅವರು 'ಮಳೆ ಧ್ಯಾನ' ಕಥೆಯಲ್ಲಿ ಕೆಲವು ಪಲಕುಗಳನ್ನು ಹಿಡಿಯುವ ಪ್ರಯತ್ನ ಮಾಡಿದ್ದಾರೆ. ಒಂಟಿತನವನ್ನು ಮೀರಿಕೊಳ್ಳಲು ತೊಳಲಾಡುವ ಗೆಳತಿಯ ಆತ್ಮಸಂಗಾತಕ್ಕೆ ತೆಕ್ಕೆ ಹಾಕಿಕೊಳ್ಳುವ ಹೇಮಾ ಕಿವಿಯಾಗುವ ಮೂಲಕ ಅವಳ ಒಳತೋಟಿಯನ್ನು ಕಾಪಿಡುತ್ತಾಳೆ.

ವಿವಾಹದ ಆಚೆಗಿನ ಲೈಂಗಿಕ ಸಂಬಂಧಗಳನ್ನು ಜಾಲಾಡುವ ಕಥೆಗಾರ್ತಿ ಅತ್ಯಂತ ಸ್ಪಷ್ಟ ತಿಳಿವಳಿಕೆಯೊಂದಿಗೆ ನಿರೂಪಿಸಿರುವುದು ಮುಖ್ಯವಾಗಿ ಗಮನಿಸಬೇಕಾದ ತಿಳಿವಾಗಿದೆ. ಯಾವುದೇ ರೀತಿಯ ತೀರ್ಮಾನಗಳನ್ನು ಮಂಡಿಸದೆ ಕಿವಿ-ಕಣ್ಣುಗಳನ್ನು ಈ ವಿಚಾರಕ್ಕೆ ತೆರೆದುಕೊಂಡು ಅದನ್ನು ಪ್ರಕೃತಿಯ ವೈವಿಧ್ಯದೊಂದಿಗೆ ಸಮೀಕರಿಸುವ ರೀತಿ ಅನನ್ಯವಾಗಿದೆ. "ಮೀನುಗುಂಡಿಯಿಂದ ಉಕ್ಕಿದ ಮಳೆ ನೀರಲ್ಲಿ ಆಚೆ ಬಂದು ನೆಲದಲ್ಲಿ ಒದ್ದಾಡುತ್ತಿದ್ದ ಒಂದು ಕೆಂಬಣ್ಣದ ಮೀನು, ಹಕ್ಕಿಗಳ ಕಿಚಿಪಿಚಿ, ಅಳಿಲ ಚಿಮಿಚಿಮಿ... ಅದರ ಗೂಡುಗಳಲ್ಲಿ ಏನು ಅನಾಹುತವೋ?" ಬದುಕಿನ ವಿವಿಧ ನೆಲೆಯ ಒದ್ದಾಟಗಳನ್ನು ಹೀಗೆ ನೋಡುವ ಸಹೃದಯರೇ ಇಲ್ಲಿ ಎಲ್ಲಾ ಕಥೆಗಳ ಕೇಂದ್ರ. ತಣ್ಣನೆ ಲೋಕಸಂಕಟಗಳಿಗೆ ಮೈಯಾನಿಸಿ ಅವುಗಳಲ್ಲಿ ಭೇದವೆಣಿಸದೆ ಒಳಗೊಳ್ಳುವಿಕೆ ಮಹಿಳಾ ಅಸ್ಮಿತೆಯನ್ನು ಕಟ್ಟುವ ನೆಲೆಯಾಗಿದೆ. ಇಂಥ ನೋಟಗಳನ್ನು 'ಪದುಮ ಪುರುಷ', 'ಮೂರು ಮನೆಗಳು', 'ನೆಲೆ ಹುಡುಕುತ್ತ' ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ನೆಲೆಯಿಲ್ಲದ ನೆಲೆಗಾಗಿ ಮಹಿಳೆ ನಿತ್ಯ ಹುಡುಕುವುದಿದೆ. ಎಷ್ಟಾದರೂ